Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)

ವಿಶೇಷ ಸಂಚಿಕೆ

| | |
|---|---|
| भाग—IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

प्राधिकार से प्रकाशित

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, नोव्हेंबर 10, 1986 | कार्तिक 19, 1908 (शक) | खण्ड—4 |
| No. 1 | New Delhi Monday, November 10, 1986 | Karthika 19, 1908 (Saka) | Vol. 4 |
| ಸಂಖ್ಯೆ ೧ | ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | ಕಾರ್ತೀಕ ೧೯, ೧೯೦೮ (ಶಕ) | ಸಂಪುಟ ೪ |


## MINISTRY OF LAW AND JUSTICE

(Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976—are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂ ವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಜನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ನಾಟಕ ಪ್ರದರ್ಶನ ಅಧಿನಿಯಮ 1876.

(1876ರ ಅಧಿನಿಯಮ ಸಂಖ್ಯೆ 19)

[16ನೇ ಡಿಸೆಂಬರ್ 1876]

**ಸಾರ್ವಜನಿಕ ನಾಟಕ ಪ್ರದರ್ಶನಗಳ ಉತ್ತಮ ನಿಯಂತ್ರಣಕ್ಕಾಗಿ ಅಧಿನಿಯಮ.**

ನಿಂದಾತ್ಮಕ, ಮಾನಹಾನಿಕರ, ರಾಜದ್ರೋಹಾತ್ಮಕ ಅಥವಾ ಅಶ್ಲೀಲ ಸಾರ್ವಜನಿಕ ನಾಟಕ ಪ್ರದರ್ಶನಗಳನ್ನು ನಿಷೇಧಿಸಲು ಸರ್ಕಾರಕ್ಕೆ ಅಧಿಕಾರ ನೀಡುವುದು ವಿಹಿತವಾಗಿರುವುದರಿಂದ ಕೆಳಕಂಡಂತೆ ಈ ಮೂಲಕ ಅಧಿನಿಯಮಿತವಾಗಿದೆ.

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.—(1) ಈ ಅಧಿನಿಯಮವನ್ನು ನಾಟಕ ಪ್ರದರ್ಶನ ಅಧಿನಿಯಮ, 1876 ಎಂದು ಕರೆಯತಕ್ಕದು. ಇದು, 1956ರ ನವೆಂಬರ್ 1ನೇ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಖ ಭಾಗದ ರಾಜ್ಯಗಳೊಳಗೆ ಅಡಕವಾದ ರಾಜ್ಯಕ್ಷೇತ್ರಗಳನ್ನುಳಿದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

2. ಮ್ಯಾಜಿಸ್ಟ್ರೇಟನ ಪರಿಭಾಷೆ.—ಈ ಅಧಿನಿಯಮದಲ್ಲಿ ''ಮ್ಯಾಜಿಸ್ಟ್ರೇಟ್'' ಎಂದರೆ, ಪ್ರೆಸಿಡೆನ್ಸಿ ನಗರಗಳಲ್ಲಿ ಪೋಲೀಸ್ ಮ್ಯಾಜಿಸ್ಟ್ರೇಟ್ ಮತ್ತು ಬೇರೆಡೆಗಳಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟ್.

3. ಕೆಲವು ನಾಟಕ ಪ್ರದರ್ಶನಗಳನ್ನು ನಿಷೇಧಿಸಲು ಅಧಿಕಾರ.—ರಾಜ್ಯ ಸರ್ಕಾರವು, ಸಾರ್ವಜನಿಕ ಸ್ಥಳದಲ್ಲಿ ಪ್ರದರ್ಶಿಸಿದ ಅಥವಾ ಪ್ರದರ್ಶಿತವಾಗಲಿರುವ ಯಾವುದೇ ನಾಟಕ ಮೂಕಾಭಿನಯ ಅಥವಾ ಇತರ ನಾಟಕವು—

(ಕ) ನಿಂದಾತ್ಮಕ ಅಥವಾ ಮಾನಹಾನಿಕರ ಸ್ವರೂಪದ್ದಾಗಿದೆಯೆಂದು, ಅಥವಾ

(ಖ) ಭಾರತದಲ್ಲಿ ಕಾನೂನಿನ ಮೂಲಕ ಸ್ಥಾಪಿತವಾದ ಸರ್ಕಾರದ ವಿರುದ್ಧ ಅಪ್ರೀತಿ ಭಾವನೆಗಳನ್ನು ಉದ್ರೇಕಿಸುವ ಸಂಭವವಿದೆಯೆಂದು; ಅಥವಾ

(ಗ) ಪ್ರದರ್ಶನದಲ್ಲಿ ಹಾಜರಿರುವ ವ್ಯಕ್ತಿಗಳನ್ನು ನೀತಿಭ್ರಷ್ಟರನ್ನಾಗಿ ಮತ್ತು ಭ್ರಷ್ಟರನ್ನಾಗಿ ಮಾಡುವ ಸಂಭವವಿದೆಯೆಂದು, ಅಭಿಪ್ರಾಯಪಟ್ಟಾಗಲೆಲ್ಲ ರಾಜ್ಯ ಸರ್ಕಾರ ಅಥವಾ ಪ್ರೆಸಿಡೆನ್ಸಿ ನಗರಗಳ ಹೊರಗೆ ರಾಜ್ಯ ಸರ್ಕಾರ ಅಥವಾ ಈ ಸಂಬಂಧದಲ್ಲಿ ಅದು ಅಧಿಕೃತಗೊಳಿಸಬಹುದಾದಂಥ ಮ್ಯಾಜಿಸ್ಟ್ರೇಟನ್ನು ಪ್ರದರ್ಶನವನ್ನು ಆದೇಶದ ಮೂಲಕ ನಿಷೇಧಿಸಬಹುದು.

ವಿವರಣೆ.—ಹಣ ಸಂದಾಯದ ಮೇಲೆ ಪ್ರದರ್ಶನವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಪ್ರವೇಶ ನೀಡಲಾಗುವ ಯಾವುದೇ ಕಟ್ಟಡ ಅಥವಾ ಆವರಣವನ್ನು ಈ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ''ಸಾರ್ವಜನಿಕ ಸ್ಥಳ''ವೆಂದು ಭಾವಿಸತಕ್ಕದು.

4. ನಿಷೇಧಾಜ್ಞೆಯನ್ನು ಜಾರಿ ಮಾಡಲು ಅಧಿಕಾರ ಆದೇಶದ ಅನನುಪಾಲನೆಗೆ ದಂಡನೆ.—ಅಂಥ ಆದೇಶದ ಪ್ರತಿಯನ್ನು ಹಾಗೆ ನಿಷೇಧಿಸಲಾದ ಪ್ರದರ್ಶನದಲ್ಲಿ ಭಾಗವಹಿಸಲಿರುವ ಯಾವನೇ ವ್ಯಕ್ತಿಗೆ ಅಥವಾ ಅಂಥ ಪ್ರದರ್ಶನವನ್ನು ನಡೆಸಲು ಉದ್ದೇಶಿಸಲಾದ ಯಾವುದೇ ಮನೆ, ಕೊಠಡಿ ಅಥವಾ ಸ್ಥಳದ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಜಾರಿ ಮಾಡಬಹುದು, ಮತ್ತು ಅಂಥ ಪ್ರತಿಯನ್ನು ಯಾವ ವ್ಯಕ್ತಿಗೆ ಜಾರಿ ಮಾಡಲಾಗಿದೆಯೋ ಆ ಯಾವನೇ ವ್ಯಕ್ತಿಯು, ಅಂಥ ಆದೇಶವನ್ನು ಉಲ್ಲಂಘಿಸಿ ಯಾವುದೇ ಕೃತ್ಯವನ್ನು ಮಾಡಿದರೆ ಅಥವಾ ಮಾಡಲು ಮನಃಪೂರ್ವಕವಾಗಿ ಅನುಮತಿಸಿದರೆ ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದನಂತರ ಅವನು, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದು.

5. ಆದೇಶವನ್ನು ಅಧಿಸೂಚಿಸಲು ಅಧಿಕಾರ.—ಯಾವುದೇ ಅಂಥ ಆದೇಶವನ್ನು ಉದ್ಘೋಷಣೆಯ ಮೂಲಕ ಅಧಿಸೂಚಿಸಬಹುದು, ಮತ್ತು ಅದರ ಒಂದು ಲಿಖಿತ ಅಥವಾ ಮುದ್ರಿತ ನೋಟೀಸನ್ನು, ಹಾಗೆ ನಿಷೇಧಿಸಲಾದ ಪ್ರದರ್ಶನದಲ್ಲಿ ಪಾತ್ರವಹಿಸಲು ಅಥವಾ ಪ್ರದರ್ಶನವನ್ನು ವೀಕ್ಷಿಸಲು ಉದ್ದೇಶಿಸಿದ ವ್ಯಕ್ತಿಗಳಿಗೆ ಆದೇಶದ ಮಾಹಿತಿಯನ್ನು ಕೊಡುವುದಕ್ಕಾಗಿ ಅಳವಡಿಸಿಕೊಳ್ಳಲಾದ ಯಾವುದೇ ಸ್ಥಳ ಅಥವಾ ಸ್ಥಳಗಳಲ್ಲಿ ಅಂಟಿಸಬಹುದು.

6. ನಿಷೇಧದ ಅನನುಪಾಲನೆಗೆ ದಂಡನೆ.—ಅಂಥ ಯಾವುದೇ ಆದೇಶದ ಅಧಿಸೂಚನೆಯ ನಂತರ ಯಾವನೇ ವ್ಯಕ್ತಿಯು—

(ಕ) ಅದರ ಮೂಲಕ ನಿಷೇಧಿಸಲಾದ ಪ್ರದರ್ಶನದಲ್ಲಿ ಅಥವಾ ಹಾಗೆ ನಿಷೇಧಿಸಲಾದ ಪ್ರದರ್ಶನದಂತೆಯೇ ಬಹುಮಟ್ಟಿಗೆ ಇರುವ ಯಾವುದೇ ಪ್ರದರ್ಶನದಲ್ಲಿ ಪಾತ್ರವಹಿಸಿದರೆ, ಅಥವಾ

(ಖ) ಅಂಥ ಯಾವುದೇ ಪ್ರದರ್ಶನವನ್ನು ನಡೆಸಲು ಯಾವುದೇ ರೀತಿಯಲ್ಲಿ ಸಹಾಯ ಮಾಡಿದರೆ, ಅಥವಾ

(ಗ) ಅಂಥ ಆದೇಶವನ್ನು ಬುದ್ಧಿಪೂರ್ವಕವಾಗಿ ಅನನುಪಾಲನೆ ಮಾಡಿ ಅಂಥ ಯಾವುದೇ ಪ್ರದರ್ಶನದಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ಪ್ರೇಕ್ಷಕನಾಗಿ ಹಾಜರಿದ್ದರೆ, ಅಥವಾ

(ಘ) ಯಾವುದೇ ಮನೆ, ಕೊಠಡಿ ಅಥವಾ ಸ್ಥಳದ ಒಡೆಯನಾಗಿದ್ದು ಅಥವಾ ಅಧಿಭೋಗದಾರನಾಗಿದ್ದು ಅಥವಾ ಅದನ್ನು ಉಪಯೋಗಿಸುತ್ತಿರುವ ವ್ಯಕ್ತಿಯಾಗಿದ್ದು ಅದನ್ನು ಅಂಥ ಯಾವುದೇ ಪ್ರದರ್ಶನಕ್ಕಾಗಿ ತೆರೆದರೆ, ಇಟ್ಟರೆ ಅಥವಾ ಬಳಸಿದರೆ ಅಥವಾ ಯಾವುದೇ ಅಂಥ ಪ್ರದರ್ಶನಕ್ಕಾಗಿ ಅದನ್ನು ತೆರೆಯಲು, ಇಡಲು ಅಥವಾ ಬಳಸಲು ಅನುಮತಿಸಿದರೆ—

ಅವನು ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದನಂತರ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದ ದಂಡನೀಯನಾಗತಕ್ಕದು.

7. **ಮಾಹಿತಿಯನ್ನು ಕೇಳಲು ಅಧಿಕಾರ.**—ಉದ್ದೇಶಿಸಲಾದ ಯಾವುದೇ ಸಾರ್ವಜನಿಕ ನಾಟಕ ಪ್ರದರ್ಶನದ ಸ್ವರೂಪವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರ ಅಥವಾ ಈ ಸಂಬಂಧದಲ್ಲಿ ಅದು ವಿಶೇಷವಾಗಿ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಯು, ತಾನು ಅವಶ್ಯವೆಂದು ಭಾವಿಸುವಂಥ ಮಾಹಿತಿಗಾಗಿ, ಪ್ರದರ್ಶಿತವಾಗಲಿರುವ ನಾಟಕದ ಲೇಖಕ, ಮಾಲೀಕ ಅಥವಾ ಮುದ್ರಕನನ್ನು ಅಥವಾ ಅದನ್ನು ಯಾವ ಸ್ಥಳದಲ್ಲಿ ಪ್ರದರ್ಶಿಸಬೇಕೆಂದು ಉದ್ದೇಶಿಸಲಾಗಿದೆಯೋ ಆ ಸ್ಥಳದ ಒಡೆಯ, ಅಥವಾ ಅಧಿಭೋಗದಾರನನ್ನು ರಾಜ್ಯ ಸರ್ಕಾರ ಅಥವಾ ಅಂಥ ಅಧಿಕಾರಿಯು ಕೇಳಬಹುದು.

ಹಾಗೆ ಕೇಳಲಾದ ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಮರ್ಥ್ಯವಿರುವಷ್ಟರ ಮಟ್ಟಿಗೆ ಅದನ್ನು ಒದಗಿಸಲು ಬದ್ಧನಾಗಿರತಕ್ಕದ್ದು, ಮತ್ತು ಈ ಪ್ರಕರಣವನ್ನು ಉಲ್ಲಂಘಿಸುವ ಯಾರೇ ಆಗಲಿ, ಭಾರತ ದಂಡ ಸಂಹಿತೆಯ (1860ರ 45) 176ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿದವನೆಂಬುದಾಗಿ ಭಾವಿಸತಕ್ಕದ್ದು.

8. **ಪ್ರವೇಶ ಮಾಡಲು ಹಾಗೂ ದಸ್ತಗಿರಿ ಮಾಡಲು ಮತ್ತು ಅಭಿಗ್ರಹಣಮಾಡಲು ಪೋಲೀಸರಿಗೆ ವಾರೆಂಟು ಕೊಡಲು ಅಧಿಕಾರ.**—ಈ ಅಧಿನಿಯಮದ ಮೇರೆಗೆ ನಿಷೇಧಿಸಲಾದ ಯಾವುದೇ ಪ್ರದರ್ಶನಕ್ಕಾಗಿ ಯಾವುದೇ ಮನೆ, ಕೊಠಡಿ ಅಥವಾ ಸ್ಥಳವನ್ನು ಉಪಯೋಗಿಸಲಾಗಿದೆ ಅಥವಾ ಉಪಯೋಗಿಸಲಾಗುವ ಸಂಭವವಿದೆ ಎಂದು ಯಾವನೇ ಮ್ಯಾಜಿಸ್ಟ್ರೇಟನಿಗೆ ನಂಬಲು ಕಾರಣವಿದ್ದರೆ, ಅವನು, ತನ್ನ ವಾರಂಟಿನ ಮೂಲಕ, ಯಾವನೇ ಪೋಲೀಸು ಅಧಿಕಾರಿಗೆ, ಯಾವುದೇ ಅಂಥ ಮನೆ, ಕೊಠಡಿ ಅಥವಾ ಸ್ಥಳವನ್ನು ಅವಶ್ಯವಾಗಬಹುದಾದ ಸಹಾಯದೊಂದಿಗೆ ರಾತ್ರಿ ಅಥವಾ ಹಗಲಿನಲ್ಲಿ ಅವಶ್ಯವಾದಲ್ಲಿ ಬಲಪ್ರಯೋಗದ ಮೂಲಕ ಪ್ರವೇಶಿಸಲು ಮತ್ತು ಅಲ್ಲಿ ಕಂಡುಬರುವ ಎಲ್ಲ ವ್ಯಕ್ತಿಗಳನ್ನು ಅಭಿರಕ್ಷೆಗೆ ತೆಗೆದುಕೊಳ್ಳಲು ಹಾಗೂ ಅಂಥ ಪ್ರದರ್ಶನದ ಉದ್ದೇಶಕ್ಕಾಗಿ ಬಳಸಲಾಗಿದೆಯೆಂದು ಕಂಡುಬರುವ ಮತ್ತು ಸಕಾರಣಯುತವಾಗಿ ಬಳಸಲುದ್ದೇಶಿಸಲಾಗಿದೆಯೆಂದು ಬಳಸಲಾಗಿದೆಯೆಂದು ಅಥವಾ ಶಂಕಿಸಲಾದ ಎಲ್ಲ ದೃಶ್ಯ ಸಲಕರಣೆಗಳನ್ನು, ಉಡುಪುಗಳನ್ನು ಮತ್ತು ಇತರ ವಸ್ತುಗಳನ್ನು ಅಭಿಗ್ರಹಣ ಮಾಡಿಕೊಳ್ಳಲು ಅಧಿಕೃತಗೊಳಿಸಬಹುದು.

9. **ದಂಡ ಸಂಹಿತೆಯ 124ಕ ಮತ್ತು 294ನೇ ಪ್ರಕರಣಗಳ ಮೇರೆಗೆ ಪ್ರಾಸಿಕ್ಯೂಷನ್ನನ್ನು ಉಳಿಸಿಕೊಳ್ಳುವಿಕೆ.**—ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧ ನಿರ್ಣಯವು ಭಾರತ ದಂಡ ಸಂಹಿತೆಯ 124ಕ ಪ್ರಕರಣ 294ನೇ ಪ್ರಕರಣದ ಮೇರೆಗಿನ ಪ್ರಾಸಿಕ್ಯೂಷನನ್ನು ಪ್ರತಿನಿಷೇಧಿಸತಕ್ಕದ್ದಲ್ಲ.

10. **ಲೈಸೆನ್ಸು ಇಲ್ಲದ ನಾಟಕ ಪ್ರದರ್ಶನಗಳನ್ನು ಯಾವುದೇ ಸ್ಥಳೀಯ ಪ್ರದೇಶದಲ್ಲಿ ನಿಷೇಧಿಸಲು ಅಧಿಕಾರ.**—ಯಾವುದೇ ಸ್ಥಳೀಯ ಪ್ರದೇಶದಲ್ಲಿ ಈ ಪ್ರಕರಣದ ಉಪಬಂಧಗಳು ಅಗತ್ಯವಾಗಿವೆ ಎಂದು ರಾಜ್ಯ ಸರ್ಕಾರಕ್ಕೆ ಕಂಡುಬಂದಾಗಲೆಲ್ಲ, ಅದು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ಗೊತ್ತುಪಡಿಸಬಹುದಾದ ದಿನದಿಂದ ಅಂಥ ಪ್ರದೇಶಕ್ಕೆ ಅಂಥ ಉಪಬಂಧಗಳನ್ನು ಅನ್ವಯಿಸಲಾಗಿದೆಯೆಂದು ಘೋಷಿಸಬಹುದು.

ಆದಿನದಂದು ಮತ್ತು ಅನಂತರ, ರಾಜ್ಯ ಸರ್ಕಾರ ಅಥವಾ ಈ ಸಂಬಂಧದಲ್ಲಿ ವಿಶೇಷವಾಗಿ ಅದು ಅಧಿಕಾರ ನೀಡಬಹುದಾದಂಥ ಅಧಿಕಾರಿಯು ಕೊಡುವ ಲೈಸೆನ್ಸಿನ ಮೇರೆಗೆ ಅಲ್ಲದೆ ಅಂಥ ಪ್ರದೇಶದೊಳಗಿನ ಸಾರ್ವಜನಿಕ ಮನೋರಂಜನೆಯ ಯಾವುದೇ ಸ್ಥಳದಲ್ಲಿ ಯಾವುದೇ ನಾಟಕದ ಪ್ರದರ್ಶನ ನಡೆಯತಕ್ಕದ್ದಲ್ಲವೆಂದು ರಾಜ್ಯ ಸರ್ಕಾರವು ಆದೇಶಿಸಬಹುದು.

ರಾಜ್ಯ ಸರ್ಕಾರಕ್ಕೆ ಅಥವಾ ಈ ಸಂಬಂಧದಲ್ಲಿ ಅದು ನೇಮಕ ಮಾಡಬಹುದಾದಂಥ ಅಧಿಕಾರಿಗೆ, ಪ್ರದರ್ಶನಕ್ಕೆ ಮೂರು ದಿನಗಳಿಗೆ ಕಡಿಮೆಯಿಲ್ಲದಂತೆ ಮುಂಚಿತವಾಗಿ ಕೃತಿಯು ಲಿಖಿತ ರೂಪದಲ್ಲಿದ್ದರೆ ಮತ್ತು ಲಿಖಿತ ರೂಪದಲ್ಲಿರುವಷ್ಟರ ಮಟ್ಟಿಗೆ ಅದರ ಒಂದು ಪ್ರತಿಯನ್ನು ಅಥವಾ ಅದು ಮೂಕಾಭಿನಯವಾಗಿದ್ದರೆ ಮತ್ತು ಹಾಗಿರುವಷ್ಟರ ಮಟ್ಟಿಗೆ, ಅದರ ತಾತ್ಪರ್ಯದ ಸಾಕಷ್ಟು ವಿವರವನ್ನು ಒದಗಿಸಿದ ಹೊರತು, ಅಂಥ ಪ್ರದೇಶದೊಳಗೆ ಯಾವುದೇ ಸಾರ್ವಜನಿಕ ಮನೋರಂಜನೆಯ ಸ್ಥಳದಲ್ಲಿ ಯಾವುದೇ ನಾಟಕ ಪ್ರದರ್ಶನ ನಡೆಯತಕ್ಕದ್ದಲ್ಲವೆಂದು ರಾಜ್ಯ ಸರ್ಕಾರವು ಆದೇಶಿಸಬಹುದು.

ಈ ಪ್ರಕರಣದ ಮೇರೆಗಿನ ಯಾವುದೇ ಆದೇಶದ ಪ್ರತಿಯನ್ನು ಸಾರ್ವಜನಿಕ ಮನೋರಂಜನೆಯ ಸ್ಥಳವನ್ನು ಇಟ್ಟ ಯಾವನೇ ವ್ಯಕ್ತಿಗೆ ಜಾರಿ ಮಾಡಬಹುದು, ಮತ್ತು ತದನಂತರ, ಅಂಥ ಆದೇಶವನ್ನು ಉಲ್ಲಂಘಿಸುವ ಯಾವುದೇ ಕೃತ್ಯವನ್ನು ಅವನು ಮಾಡಿದರೆ ಅಥವಾ ಮಾಡಲು ಪುನಃಪೂರ್ವಕವಾಗಿ ಅನುಮತಿಸಿದರೆ, ಅವನು, ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ತರುವಾಯ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

11. [ನಿರಸನಗೊಳಿಸಲಾಗಿದೆ].

12. **ಧಾರ್ಮಿಕ ಉತ್ಸವಗಳಲ್ಲಿ ನಡೆಯುವ ಪ್ರದರ್ಶನಗಳನ್ನು ಹೊರತುಪಡಿಸುವಿಕೆ.**—ಈ ಅಧಿನಿಯಮದಲ್ಲಿರುವುದಾವುದೂ, ಧಾರ್ಮಿಕ ಉತ್ಸವಗಳಲ್ಲಿನ ಯಾವುದೇ ಜಾತ್ರೆಗಳಿಗೆ ಅಥವಾ ಅದೇ ಬಗೆಯ ಪ್ರದರ್ಶನಗಳಿಗೆ ಅನ್ವಯವಾಗತಕ್ಕದ್ದಲ್ಲ.

The above translation in Kannada of the Dramatic Porformance Act, 1976 (Act No. 19 of 1976) has been authorised by the President to be published in Official Gazette under Clause (a) Section 2 of the Authorised Translations (Central Laws) Act, 1973.

*Secretary to the Government of India.*